ಸರ್ಕಾರದ ಕನ್ನಡ ವಿರೋಧಿ ಧೋರಣೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಸರೋಜಿನಿ ಮಹಿಷಿ ವರದಿ ಜಾರಿಯಾಗಬೇಕೆಂದು ಘೋಷಿಸುತ್ತಾ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಸ್.ಎಸ್. ಪಾಟೀಲ್ : ಸರೋಜಿನಿ ಮಹಿಷಿ ವರದಿ ಜಾರಿಯಾಗಬೇಕೆಂಬುದಕ್ಕೆ ನಾವೂ ಕೂಡ ಬೆಂಬಲ ಸೂಚಿಸುತ್ತೇನೆ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಉಪಾಧ್ಯಕ್ಷರೆ, ನಾವೂ ಕೂಡ ಅದಕ್ಕೆ ಬೆಂಬಲ ಸೂಚಿಸುತ್ತೇವೆ. ಸರೋಜಿನಿ ಮಹಿಷಿ ವರದಿ ಬರಲಿ. ಏಕೆ ಎಲ್ಲರೂ ಮೌನವಾಗಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಸರೋಜಿನಿ ಮಹಿಷಿ ವರದಿ ಜಾರಿ ಬರುವುದಕ್ಕೆ ನಮ್ಮದೂ ಕೂಡ ಬೆಂಬಲ ಇದೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ನರೇಂದ್ರಬಾಬುರವರೇ, ತಾವು ದಯವಿಟ್ಟು ಕುಳಿತು ಕೊಳ್ಳಿ. ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು : ಸರೋಜಿನಿ ಮಹಿಷಿ ವರದಿ ಜಾರಿಯಾಗಬೇಕು. ಇದು ಆದರೆ ಮಾತ್ರ ಇಲ್ಲಿರತಕ್ಕಂಥ ಕನ್ನಡಿಗರಿಗೆ ಕೆಲಸ ಸಿಗುವುದಕ್ಕೆ ಸಾಧ್ಯ.

ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ವಸತಿ ಶಾಲೆಗಳು

317(695) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ಒಟ್ಟು ವಸತಿ ಶಾಲೆಗಳು ಎಷ್ಟು; ಈ ಶಾಲೆಗಳಲ್ಲಿರುವ ವಿದ್ಯಾರ್ಥಿಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಇದರಲ್ಲಿ ಸ್ವಂತ ಕಟ್ಟಡ ಹೊಂದಿರುವ ವಸತಿ ಶಾಲೆಗಳು ಎಷ್ಟು ಸ್ವಂತ ಕಟ್ಟಡವಿಲ್ಲದ ಶಾಲೆಗಳು ಎಷ್ಟು;

ಇ) ಈ ವಸತಿ ಶಾಲೆಗಳಲ್ಲಿ ಮಕ್ಕಳ ಆಹಾರಕ್ಕಾಗಿ ಒದಗಿಸುವ ತಲಾನುಧಾನ ಎಷ್ಟು; ಈ ಬಾಬ್ತಿನಲ್ಲಿ ಆಗಿರುವ ವಾರ್ಷಿಕ ವೆಚ್ಚ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಈ) ಈ ಶಾಲೆಗಳ ಪರೀಕ್ಷಾ ಫಲಿತಾಂಶಗಳು ಜಿಲ್ಲೆಯ ಸರಾಸರಿಗಿಂತ ಉತ್ತಮವಾಗಿದೆಯೇ;

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರಾಜ್ಯದಲ್ಲಿ ಈ ಕೆಳಕಂಡ ವಸತಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ನಡೆಯುತ್ತಿದ್ದು. ಅವುಗಳ ಜಿಲ್ಲಾವಾರು ವಿವರ ಹಾಗೂ ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಕೆಳಕಂಡಂತೆ ಇದೆ.

1 ರಿಂದ 5ನೇ ತರಗತಿಯವರೆಗೆ 91 ವಸತಿ ಶಾಲೆಗಳು ನಡೆಯುತ್ತಿದ್ದು. ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ	ಜಿಲ್ಲೆ	ಒಟ್ಟು ವಸತಿ ಶಾಲೆಗಳ ಸಂಖ್ಯೆ	ಒಟ್ಟು ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ	ಆಹಾರಕ್ಕಾಗಿ ವಾರ್ಷಿಕ ವೆಚ್ಚ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ನಗರ	2	250	8.75
2	ಬೆಂಗಳೂರು ಗ್ರಾಮಾಂತರ	2	250	8.75
3	ಕೋಲಾರ	3	375	13.12
4	ತುಮಕೂರು	2	250	8.75
5	ಚಿತ್ರದುರ್ಗ	3	257	8.99
6	ದಾವಣಗೆರೆ	2	250	8.75
7	ಶಿವಮೊಗ್ಗ	2	107	3.74
8	ಮೈಸೂರು	3	375	13.12
9	ಮಂಡ್ಯ	1	125	4.37
10	ಹಾಸನ	5	364	12.74
11	ಚಿಕ್ಕಮಗಳೂರು	2	200	7.00
12	ದಕ್ಷಿಣ ಕನ್ನಡ	1	100	3.50
13	ಕೊಡಗು	1	50	1.75
14	ಬೆಳಗಾಂ	5	575	20.13
15	ಧಾರವಾಡ	1	125	4.37
16	ಹಾವೇರಿ	7	585	20.47
17	ಗದಗ್	1	125	4.37
18	ಬಿಜಾಪುರ	7	1000	35.00
19	ಬಾಗಲಕೋಟೆ	3	275	9.62
20	ಉತ್ತರ ಕನ್ನಡ	3	150	5.25
21	ಗುಲ್ಬರ್ಗಾ	16	2000	70.00
22	ರಾಯಚೂರು	7	875	30.62

23	ಕೊಪ್ಪಳ	1	125	4.37
24	ಬೀದರ್	8	525	18.37
25	ಬಳ್ಳಾರಿ	2	100	3.50
	ಒಟ್ಟು	91	9413	239.39

6 ರಿಂದ 10ನೇ ತರಗತಿಯವರೆಗೆ ಒಟ್ಟು 189 ವಸತಿ ಶಾಲೆಗಳು ನಡೆಯುತ್ತಿದ್ದು, ಈ ವಸತಿ ಶಾಲೆಗಳಲ್ಲಿ 28237 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ವಸತಿ ಶಾಲೆಗಳ ಸಂಖ್ಯೆ–157
ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿಲ್ಲದ ವಸತಿ ಶಾಲೆಗಳ ಸಂಖ್ಯೆ–168

ಇ) 1 ರಿಂದ 5ನೇ ತರಗತಿಯವರೆಗಿನ ವಸತಿ ಶಾಲೆಗಳಲ್ಲಿರುವ ಪ್ರತಿ ವಿದ್ಯಾರ್ಥಿಗೆ ಆಹಾರಕ್ಕಾಗಿ ಮಾಹೆಯಾನ ರೂ. 350.00 ಗಳಂತೆ 10 ತಿಂಗಳಿಗ ರೂ. 3500–00 ಗಳಂತೆ ವೆಚ್ಚ ಮಾಡಲಾಗುತ್ತಿದೆ. ಒಟ್ಟು 9.413 ವಿದ್ಯಾರ್ಥಿಗಳಿಗೆ ವರ್ಷಕ್ಕೆ ರೂ. 329.39 ಲಕ್ಷಗಳನ್ನು ವೆಚ್ಚ ಮಾಡಲಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು ಮೇಲ್ಕಂಡ ಪಟ್ಟಿಯಲ್ಲಿ ನೀಡಲಾಗಿದೆ. 6 ರಿಂದ 10ನೇ ತರಗತಿಯವರೆಗಿನ ವಸತಿ ಶಾಲೆಗಳಲ್ಲಿರುವ ಪ್ರತಿ ವಿದ್ಯಾರ್ಥಿಗೆ ಆಹಾರಕ್ಕಾಗಿ ಮಾಹೆಯಾನ ರೂ. 500–00 ಗಳಂತೆ 10 ತಿಂಗಳಿಗೆ ರೂ. 5,000–00ಗಳಂತೆ ವೆಚ್ಚ ಮಾಡಲಾಗುತ್ತಿದೆ. ಒಟ್ಟು 28237 ವಿದ್ಯಾರ್ಥಿಗಳಿಗೆ ವರ್ಷಕ್ಕೆ ರೂ. 1411.85 ಲಕ್ಷಗಳನ್ನು ವೆಚ್ಚ ಮಾಡಲಾಗುತ್ತಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಈ) 1 ರಿಂದ 5ನೇ ತರಗತಿಯವರೆಗಿನ ವಸತಿ ಶಾಲೆಗಳ ವಿದ್ಯಾರ್ಥಿಗಳ ಜಿಲ್ಲಾವಾರು ಫಲಿತಾಂಶವು ಉತ್ತಮವಾಗಿದೆ. 2 ಜಿಲ್ಲೆಗಳಲ್ಲಿ ಮಂಡ್ಯ 82% ಧಾರವಾಡ 95% ಫಲಿತಾಂಶವಿದ್ದು, ಉಳಿದ ಜಿಲ್ಲೆಗಳಲ್ಲಿ ಶೇಕಡ 100 ಇರುತ್ತದೆ. 6 ರಿಂದ 10ನೇ ತರಗತಿಯವರೆಗಿನ ವಸತಿ ಶಾಲೆಗಳ ರಾಜ್ಯದ ಸರಾಸರ ಫಲಿತಾಂಶ ಶೇಕಡ 68.46 ಇದ್ದು, ವಸತಿ ಶಾಲೆಗಳ ಸರಾಸರಿ ಫಲಿತಾಂಶ ಶೇಕಡ 88.89 ಇರುತ್ತದೆ. ಜಿಲ್ಲೆಗಳ ಸರಾಸರಿ ಫಲಿತಾಂಶಕ್ಕಿಂತ ವಸತಿ ಶಾಲೆಗಳ ಫಲಿತಾಂಶವು ಉತ್ತಮವಾಗಿರುತ್ತದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.

ಅನುಬಂಧ–1

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 189 ವಸತಿ ಶಾಲೆಗಳು, 2006–07ನೇ ಸಾಲಿಗೆ ದಾಖಲಾದ ವಿದ್ಯಾರ್ಥಿಗಳ ವಿವರ ಹಾಗೂ ದಾಖಲಾದ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ತಗಲುವ ವೆಚ್ಚದ ಜಿಲ್ಲಾವಾರು ವಿವರ

ಕ್ರ ಸಂ	ಜಿಲ್ಲೆ	ಒಟ್ಟು ವಸತಿ ಶಾಲೆಗಳ ಸಂಖ್ಯೆ	ಒಟ್ಟು ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ	ಆಹಾರಕ್ಕಾಗಿ ವಾರ್ಷಿಕ ವೆಚ್ಚ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ನಗರ	3	487	24.35
2	ಬೆಂಗಳೂರು ಗ್ರಾಮಾಂತರ	11	1146	57.30
3	ಚಿತ್ರದುರ್ಗ	7	423	21.15
4	ಕೋಲಾರ	9	1248	62.40
5	ಶಿವಮೊಗ್ಗ	5	944	47.20
6	ತುಮಕೂರು	5	629	31.45
7	ದಾವಣಗೆರೆ	8	1235	61.75
8	ಮೈಸೂರು	8	883	44.15
9	ಚಿಕ್ಕಮಗಳೂರು	9	1553	77.65
10	ದಕ್ಷಿಣ ಕನ್ನಡ	5	823	41.15
11	ಹಾಸನ	6	1113	55.65
12	ಮಂಡ್ಯ	9	1840	92.00
13	ಚಾಮರಾಜನಗರ	5	584	29.20
14	ಉಡುಪಿ	1	98	4.90
15	ಬೆಳಗಾಂ	11	2313	115.65
16	ಬಿಜಾಪುರ	7	1211	60.55
17	ಧಾರವಾಡ	3	530	26.50
18	ಉತ್ತರ ಕನ್ನಡ	6	676	33.80
19	ಬಾಗಲಕೋಟೆ	8	1499	74.95
20	ಗದಗ	6	561	28.05
21	ಹಾವೇರಿ	5	841	42.05
22	ಗುಲ್ಬರ್ಗಾ	15	2543	127.15
23	ಬಳ್ಳಾರಿ	9	1261	63.05
24	ಬೀದರ್	7	1134	56.70
25	ರಾಯಚೂರು	12	1257	62.85
26	ಕೊಪ್ಪಳ	7	922	46.10
27	ಕೊಡಗು	2	483	24.15
	ಒಟ್ಟು	189	28237	1411.85

ಶ್ರೀ ಎಸ್.ಎಸ್. ಪಾಟೀಲ್ (ಮಾನ್ಯ ಡಿ.ಆರ್. ಪಾಟೀಲ್ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಿಜವಾಗಿಯೂ ಕೂಡ ಬಹಳ ಸಂತೋಷ ಆಗುತ್ತದೆ. ವಸತಿ ಶಾಲೆಗಳಲ್ಲಿರತಕ್ಕಂಥ ಮಕ್ಕಳ ಫಲಿತಾಂಶ 100ಕ್ಕೆ 95ರಷ್ಟು ಮತ್ತೆ ಕೆಲವು ಕಡೆ 100 ಕ್ಕೆ 100 ರಷ್ಟೂ ಕೂಡ ಬರುತ್ತಿದೆ. ಇದು ನಿಜವಾಗಿಯೂ ಕೂಡ ಬಹಳ ಸಂತೋಷ ತರತಕ್ಕಂಥ ವಿಚಾರ. ಆದರೆ ದುರ್ದೈವ ಏನೆಂದರೆ ಇವರ ವಸತಿ ಶಾಲೆಗಳು ಕೇವಲ 157 ಮಾತ್ರ ಇದೆ. ಮತ್ತೆ ಕಟ್ಟಡ ಇಲ್ಲದೇ ಇರತಕ್ಕಂಥದ್ದು ಇನ್ನೂ 163 ಇದೆ. ವಿದ್ಯಾಭ್ಯಾಸ ಮಾಡತಕ್ಕಂಥ ಹುಡುಗರು ಇರಬೇಕಾದರೆ ಈ ವಸತಿ ಶಾಲೆಗಳು ಚೆನ್ನಾಗಿ ಇರಬೇಕಾಗುತ್ತದೆ. ಆದರೆ, ಕೆಲವು ಕಡೆ ಯಾವುದೊಂದು ಕಟ್ಟಡಗಳಲ್ಲಿ ಈ ಶಾಲೆಗಳನ್ನು ನಡೆಸುತ್ತಿದ್ದಾರೆ. ಆದ್ದರಿಂದ 163 ವಸತಿ ಶಾಲೆಗಳಿಗೆ ಇನ್ನೂ ಕಟ್ಟಡಗಳು ಇರುವುದಿಲ್ಲ. ಆದ್ದರಿಂದ ಇವುಗಳಿಗೆ ಕಟ್ಟಡಗಳನ್ನು ಯಾವಾಗ ಕಟ್ಟಿಸಿ ಕೊಡುತ್ತೀರಿ? ನಬಾರ್ಡ್ ಸಂಸ್ಥೆಯಿಂದ ಸಾಲ ತೆಗೆದುಕೊಂಡು ಈ ಎಲ್ಲಾ ಕಟ್ಟಡಗಳನ್ನು ಕಟ್ಟಿಬಿಡಿ. ನಿಜವಾಗಿಯೂ ಕೂಡ ಈ ವಸತಿ ಶಾಲೆಗಳಲ್ಲಿ ಇರುವ ಮಕ್ಕಳ ಸ್ಥಿತಿ ಚೆನ್ನಾಗಿಲ್ಲ. ನೀವು ಹೋಗಿ ಎಲ್ಲವೂ ಕೂಡ ನೋಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಎಲ್ಲದಕ್ಕೂ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೀರಾ ಎಂಬುದರ ಬಗ್ಗೆ ಹೇಳಬೇಕು. ಮತ್ತೆ ಇಲ್ಲಿರತಕ್ಕಂಥ ಮಕ್ಕಳಿಗೆ 500 ರೂಪಾಯಿ ಕೊಡುತ್ತೀರಿ. ಆದರೆ ಬೇರೆ ಕಡೆ ಇರುವ ಮಕ್ಕಳಿಗೆ ಎಷ್ಟು ಕೊಡುತ್ತೀರಿ? ಏಕೆಂದರೆ ಅಲ್ಲಿರತಕ್ಕಂಥ ಮಕ್ಕಳಿಗೂ ಊಟವೆಲ್ಲಾ ಕೊಡಬೇಕಾಗುತ್ತದೆ. ಆದ್ದರಿಂದ ಅಲ್ಲಿರತಕ್ಕಂಥ ಮಕ್ಕಳಿಗೂ ಇಷ್ಟೇ ಹಣವನ್ನು ಕೊಡಬೇಕಾಗುತ್ತದೆ. ಆದ್ದರಿಂದ ಬೇರೆ ಹಾಸ್ಟೆಲ್‌ಗಳಿಗೂ ಇಷ್ಟೇ ಹಣ ಕೊಡುತ್ತೀರಾ ಎಂಬುದನ್ನು ಹೇಳಬೇಕು. ಮತ್ತೆ ವಸತಿ ಶಾಲೆಗಳಲ್ಲಿ ಒಳ್ಳೆಯ ಫಲಿತಾಂಶ ಬರುತ್ತಿರುವುದು ಪ್ರತಿ ತಾಲ್ಲೂಕಿನಲ್ಲೊಂದು ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೀರಾ ಎಂಬುದರ ಬಗ್ಗೆ ಕೂಡ ದಯವಿಟ್ಟು ಹೇಳಬೇಕು.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ : ಸನ್ಮಾನ್ಯ ಉಪಾಧ್ಯಕ್ಷರೆ, ವಸತಿ ಶಾಲೆಗಳಿಗೆ ಕಟ್ಟಡ ಇಲ್ಲದೆ ಇರುವ ಕಡೆ ನಬಾರ್ಡ್ ಸಂಸ್ಥೆಯಿಂದ ಸಾಲ ತೆಗೆದುಕೊಂಡಾದರೂ ಕಟ್ಟಡಗಳನ್ನು ಕಟ್ಟಬೇಕೆಂದು ಮಾನ್ಯ ಹಿರಿಯ ಸದಸ್ಯರು ಹೇಳಿದ್ದಾರೆ. ವಸತಿ ಶಾಲೆಗಳು ಕಟ್ಟಡಗಳನ್ನು ಕಟ್ಟುವುದಕ್ಕೋಸ್ಕರ ಸರ್ಕಾರ ಈಗಾಗಲೇ ಬಜೆಟ್‌ನಲ್ಲಿ ಹಣ ಘೋಷಣೆ ಮಾಡಿದೆ. ಈ ಸಲ ಆಗಬೇಕಾಗಿರತಕ್ಕಂಥ ವಸತಿ ಶಾಲೆಗಳನ್ನು ಬಿಟ್ಟು ಹಿಂದೆ ಆಗಬೇಕಾಗಿರತಕ್ಕಂಥ ವಸತಿ ಶಾಲೆಗಳ ಕಟ್ಟಡಗಳನ್ನು ನಾವು ಹಂತ ಹಂತವಾಗಿ ಕಟ್ಟಬೇಕಾಗಿದೆ. 2006–2007ನೇ ಸಾಲಿನಲ್ಲಿ ಸುಮಾರು 20 ರಿಂದ 25 ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡುತ್ತೇವೆಂಬುದನ್ನು ತಮ್ಮ ಮುಖಾಂತರ ಮಾನ್ಯ

ಸದದ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮತ್ತೆ ಈ ಹಾಸ್ಟೆಲ್‌ಗಳಲ್ಲಿ ಮತ್ತು ಬೇರೆ ಹಾಸ್ಟೆಲ್‌ಗಳಲ್ಲಿ ಎಷ್ಟು ಹಣ ಮಕ್ಕಳಿಗೆ ಕೊಡುತ್ತಾರೆಂದು ಮಾನ್ಯ ಸದಸ್ಯರು ಕೇಳಿದರು. ಅಲ್ಲಿಯೂ ಕೂಡ ಅದೇ ರೀತಿಯಾಗಿ ಕೊಡಲಾಗುತ್ತದೆ. ಈ ಹಣ ಬಹಳ ಕಡಿಮೆಯಾಗಿದೆ ಇದನ್ನು ಹೆಚ್ಚಿಸಬೇಕೆಂದು ನಮಗೆ ಮಾನ್ಯ ಸಚಿವರುಗಳಿಂದ ಮತ್ತು ಮಾನ್ಯ ಶಾಸಕರುಗಳಿಂದ ಮತ್ತು ಬೇರೆ ಕಡೆಯಿಂದಲೂ ಒತ್ತಡ ಬಂದಿದೆ. ಆದ್ದರಿಂದ ಇದರ ಬಗ್ಗೆ ಖಂಡಿತ ಪರಿಶೀಲನೆ ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಪ್ರತಿಯೊಂದು ತಾಲ್ಲೂಕಿನಲ್ಲೊಂದು ವಸತಿ ಶಾಲೆಗಳನ್ನು ಪ್ರಾರಂಭ ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದೆ. ಅದಕ್ಕೆ ತಾವು ಉತ್ತರ ಕೊಡಲಿಲ್ಲ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ : ಸನ್ಮಾನ್ಯ ಉಪಾಧ್ಯಕ್ಷರೆ, 2006–2007ನೇ ಸಾಲಿನಲ್ಲಿ ಹೊಸದಾಗಿ 45 ವಸತಿ ಶಾಲೆಗಳನ್ನು ಪ್ರಾರಂಭ ಮಾಡುವ ಬಗ್ಗೆ ಈಗಾಗಲೇ ಬಜೆಟ್‌ನಲ್ಲಿ ಹೇಳಲಾಗಿದೆ. ಇದಲ್ಲದೆ ಇನ್ನೂ 25 ವಸತಿ ಶಾಲೆಗಳನ್ನು ಹೆಚ್ಚಿಗೆ ಕೊಡಬೇಕೆಂದು ಹಣಕಾಸಿನ ಇಲಾಖೆಗೆ ಕೇಳಿಕೊಂಡಿದ್ದೇವೆ. ಈಗ 45 ವಸತಿ ಶಾಲೆಗಳನ್ನು ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ 25 ಸಹ ಬಂದರೆ ಅವುಗಳನ್ನೂ ಕೂಡ ಪ್ರಾರಂಭ ಮಾಡುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜ್ : ಮಾನ್ಯ ಉಪಾಧ್ಯಕ್ಷರೆ, ಡಾ. ನಂಜುಂಡಪ್ಪರವರ ವರದಿಯಲ್ಲಿ ಯಾವ ತಾಲ್ಲೂಕುಗಳಲ್ಲಿ ಶಿಕ್ಷಣದ ಮಟ್ಟ ಕಡಿಮೆ ಇದೆ ಎಂಬುದನ್ನು ಈಗಾಗಲೇ ಗುರುತಿಸಿ ವರದಿ ಕೊಟ್ಟಿದ್ದಾರೆ. ತಮಗೆ ಗೊತ್ತಿರುವಂತೆ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಒಂದು ಒಳ್ಳೆಯ ಕಟ್ಟಡವನ್ನು ಬಾಡಿಗೆ ತೆಗೆದುಕೊಳ್ಳುವುದಕ್ಕೂ ಕೂಡ ಇವತ್ತಿನದಿವಸ ಆಗುವುದಿಲ್ಲ. ಆದ್ದರಿಂದ ಅಲ್ಲಿ ಕಟ್ಟಡಗಳು ಹೆಚ್ಚಿಗೆ ಕಟ್ಟಿಸಿ ಕೊಡತಕ್ಕಂಥದರ ಬಗ್ಗೆ ಹೆಚ್ಚಿನ ಒಂದು ಮಹತ್ವವನ್ನು ಕೊಡಬೇಕು. ಮತ್ತೆ ಅದರ ಜೊತೆಯಲ್ಲಿ ಹೊಸದಾಗಿ ವಸತಿ ಶಾಲೆಗಳನ್ನು ತೆಗೆಯುವುದರ ಬಗ್ಗೆ ಹೇಳುವುದಾದರೆ, ಯಾವ ಪ್ರದೇಶಗಳಲ್ಲಿ ಈಗಾಗಲೇ ಸಾಕಷ್ಟು ವಸತಿ ಶಾಲೆಗಳಿವೆ ಎಂಬುದನ್ನು ಮತ್ತು ಯಾವ ಪ್ರದೇಶದಲ್ಲಿ ವಸತಿ ಶಾಲೆಗಳು ಕಡಿಮೆ ಇದೆ ಎಂಬುದನ್ನು ಹಾಗೂ ಯಾವ ಪ್ರದೇಶಗಳಿಗೆ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂಬುದರ ಬಗ್ಗೆ ಮತ್ತು ಯಾವ ಪ್ರದೇಶಗಳಲ್ಲಿ ಬಡವರ ಸಂಖ್ಯೆ ಹೆಚ್ಚಿದೆ ಎಂಬುದರ ಬಗ್ಗೆ ತಾವು ಗಮನಹರಿಸಬೇಕಾಗುತ್ತದೆ. ಇದನ್ನೆಲ್ಲಾ ಗಮನದಲ್ಲಿಟ್ಟು

ಕೊಂಡು ಕೊಟ್ಟಾಗ ಮಾತ್ರ ಬಡವರ ಮಕ್ಕಳಿಗಾಗಿ ಮತ್ತು ಬಡ ಜನರಿಗೆ ಅನುಕೂಲವಾದಂಥ ಪರಿಸ್ಥಿತಿ ಕಲ್ಪಸಿ ಕೊಡಬೇಕಾದರೆ ಈ ಸಾರಿ ತಾವು ಕೊಡುತ್ತಿರುವ 45 ವಸತಿ ಶಾಲೆಗಳು ಬಹಳಷ್ಟು ಕಡಿಮೆ ಆಗುತ್ತವೆಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನದಿವಸ ಹಿರಿಯ ಸಚಿವರು ಇಲ್ಲಿದ್ದೀರಿ. ಆದ್ದರಿಂದ ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಇವತ್ತಿನದಿವಸ ಹೈದರಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಸಾಕಷ್ಟು ತೊಂದರೆಗಳಿವೆ. ಈಗಾಗಲೇ 7 ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಬಳ್ಳಾರಿ, ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳು ಶಿಕ್ಷಣದಲ್ಲಿ ಅತ್ಯಂತ ಹಿಂದುಳಿದಿವೆ ಎಂದು ಈಗಾಗಲೇ ಗುರುತಿಸಿದ್ದು ಇದನ್ನು ಡೈರೆಕ್ಟರೇಟ್ ಕೂಡ ರೆಕಮೆಂಡ್ ಮಾಡಿದ್ದಾರೆ. ಆದ್ದರಿಂದ, ಇಲ್ಲಿಗೆ ಕೊಡಬೇಕಾಗಿರತಕ್ಕಂಥ ವ್ಯವಸ್ಥೆಯ ಬಗ್ಗೆ ಅಂದರೆ, ಪ್ರೌಢ ಶಾಲೆಗಳಾಗಲಿ ಅಥವಾ ಜೂನಿಯರ್ ಕಾಲೇಜುಗಳು ಅಥವ ವಸತಿ ಶಾಲೆಗಳಿಗೆ ತಾವು ಹೆಚ್ಚಿನ ಒಂದು ಆದ್ಯತೆ ಕೊಡುತ್ತಿಲ್ಲ. ಆದ್ದರಿಂದ ದಯವಿಟ್ಟು ಅದರ ಬಗ್ಗೆ ಗಮನಹರಿಸಬೇಕೆಂದು ಮಾನ್ಯ ಉಪಾಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು : ನನ್ನದೊಂದು ಪ್ರಶ್ನೆ. ಆದ್ದರಿಂದ ನನ್ನ ಪ್ರಶ್ನೆಗೂ ಮಾನ್ಯ ಸಚಿವರು ಜೊತೆಯಲ್ಲೇ ಉತ್ತರ ಕೊಡಲಿ.

ಉಪಾಧ್ಯಕ್ಷರು : ಮಾನ್ಯ ನರೇಂದ್ರಬಾಬುರವರೆ, ಈ ಪ್ರಶ್ನೆ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಸಮಸ್ಯೆ ಬಗ್ಗೆ ಇದೆ. ಆದ್ದರಿಂದ ಬೇಕಾದರೆ ಸಪ್ಲಿಮೆಂಟರಿ ಪ್ರಶ್ನೆಯನ್ನು ಅನಂತರ ತಾವು ಕೇಳಿ. ಮಧ್ಯದಲ್ಲಿ ಈ ರೀತಿ ಮಾತನಾಡುವುದು ಬೇಡ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ : ಮಾನ್ಯ ಉಪಾಧ್ಯಕ್ಷರೆ, ಬಹಳ ಹಿಂದುಳಿದ ಪ್ರದೇಶ ಮತ್ತು ಅತಿ ಬಡವರು ಇರತಕ್ಕಂಥ ಪ್ರದೇಶಗಳಲ್ಲಿ ವಸತಿ ಶಾಲೆಗಳನ್ನು ತೆಗೆಯಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಡಾ॥ ನಂಜುಂಡಪ್ಪನವರು ಹಿಂದುಳಿದ ಮತ್ತು ಅತೀ ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಿ ಅವರು ನೀಡಿರತಕ್ಕಂಥ ವರದಿಯನ್ನು ಆಧಾರವನ್ನಾಗಿಟ್ಟುಕೊಂಡು ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ರಾಯಚೂರು ಮತ್ತು ಗುಲ್ಬರ್ಗಾ, ಬೀದರ್ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಾರಂಭ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಗಮನದಲ್ಲಿಟ್ಟು ಕೊಳ್ಳುತ್ತೇವೆ. ಏಕೆಂದರೆ ಡಾ॥ ನಂಜುಂಡಪ್ಪನವರ ವರದಿ ಆಧಾರದ ಮೇಲೆ ಅತೀ ಹಿಂದುಳಿದ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು ಬಡಮಕ್ಕಳಿಗೆ ಮತ್ತು ಯಾರಿಗೂ ಸಹ ತೊಂದರೆ ಆಗದ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳತ್ತದೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಶ್ರೀ ಶ್ರೀನಿವಾಸ ಗೌಡರು ಪ್ರಶ್ನೆ ಕೇಳಬೇಕು. ಅವರು ಬಂದಿಲ್ಲ ಈಗ ಮುಂದಿನ ಪ್ರಶ್ನೆ ಮಾನ್ಯ ಮಾಮನಿ ವಿಶ್ವನಾಥ್ ಕರಬಸಪ್ಪನವರದು ತಾವು ಪ್ರಶ್ನೆ ಕೇಳಿ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನಲ್ಲಿ ಸಂಚಾರಿ ಆರೋಗ್ಯ ಘಟಕವನ್ನು ಸ್ಥಾಪಿಸುವ ಬಗ್ಗೆ

319(1511) ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ (ಪರಸಗಡ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹರಳಕಟ್ಟೆ ಗ್ರಾಮಾದಿಂದ 25 ಕಿ.ಮೀ ಅಂತರದಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದೇ ಇರುವುದರಿಂದ ಸಂಚಾರಿ ಆರೋಗ್ಯ ಘಟಕ ಸ್ಥಾಪನೆ ಕುರಿತು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹರಳಕಟ್ಟೆ ಗ್ರಾಮದಲ್ಲಿ ಸಂಚಾರಿ ಆರೋಗ್ಯ ಘಟಕ ಸ್ಥಾಪನೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ಅಶೋಕ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಸ್ತಾವನೆ ಬಂದಿರುತ್ತದೆ.

ಆ) ಸರ್ಕಾರದ ಮುಂದೆ ಪ್ರಸ್ತಾವನೆ ಇದ್ದು ಸರ್ಕಾರದ ಮಾರ್ಗಸೂಚಿ ಹಾಗೂ ಅನುದಾನ ಲಭ್ಯತೆ ಪ್ರಕಾರ ಪರಿಶೀಲಿಸಲಾಗುವುದು.

ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಮಾನ್ಯ ಸಚಿವರು ಒದಗಿಸಿದ್ದಾರೆ. ಬೆಳಗಾಂ ಜಿಲ್ಲೆ ವಸದತ್ತಿ ತಾಲ್ಲೂಕಿನ ಹರಳಕಟ್ಟೆ ಗ್ರಾಮದಿಂದ ಸುಮಾರು 25 ಕಿ.ಮೀ. ಅಂತರದಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದೇ ಇರುವುದರಿಂದ ಸಂಚಾರ ಆರೋಗ್ಯ ಘಟಕವನ್ನು ಸ್ಥಾಪನೆ ಮಾಡಬೇಕೆಂದು ನಾನು ಎರಡು ವರ್ಷಗಳಿಂದ ಕೇಳುತ್ತಿದ್ದೇವೆ. ಇದರ ಪ್ರಸ್ತಾವನೆ ಸರ್ಕಾರದಲ್ಲಿ ಇದೆ ಎಂದು ಹೇಳಿದ್ದಾರೆ. ಆದರೆ, ಮಾರ್ಗಸೂಚಿ ಹಾಗೂ ಅನುದಾನ ಲಭ್ಯತೆ ಪ್ರಕಾರ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಈಗ ಹೊಸದಾಗಿ ಪಿಹೆಚ್‌ಸಿಗಳನ್ನು ಕೊಡುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಪಿಹೆಚ್‌ಸಿ ಅನ್ನು ಕೊಡುವುದಕ್ಕೆ ಆಗದೇ ಇದ್ದರೆ ಪ್ರೈಮರಿ ಹೆಲ್ತ್ ಯುನಿಟ್ ಆದರೂ ಕೊಡಿ ಎಂದು ಕೇಳುತ್ತಿದ್ದೇನೆ. ನಿಜವಾಗಿಯೂ ಕೂಡ ಜನಸಂಖ್ಯೆ ಹೆಚ್ಚಾಗುತ್ತಿದೆ. ಈಗ ಇದ್ದಂಥ ಪಿಹೆಚ್‌ಸಿ ಗಳು ಬಹಳ ಕಡಿಮೆ ಇದೆ. ಮತ್ತೆ ಅನ್ ಇವನ್ ಡಿಸ್ಟ್ರಿಬ್ಯೂಷನ್ ಆಗಿವೆ.